1073 (1599) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುಮೋದನೆ ಕೊರಿ ಕಳುಹಿಸಿರುವ ಪ್ರಸ್ತಾವನೆಗಳ ಪೈಕಿ ಬಾಕಿ ಇರುವ ಪ್ರಸ್ತಾವನೆಗಳು ಯಾವುವು;

ಆ) ಮೇಲ್ಕಂಡ ಪ್ರಸ್ತಾವನೆಗಳ ಪೈಕಿ ಯಾವ ಯಾವ ಪ್ರಸ್ತಾವನೆಗಳನ್ನು ಯಾವಾಗ ಕಳುಹಿಸಲಾಯಿತು;

ಇ) ಮೇಲ್ಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ಪಡೆಯಲು ಸರ್ಕಾರ ಮಾಡಿದ ಪ್ರಯತ್ನಗಳೇನು; ಹಾಲಿ ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ?

ಶ್ರೀ ಚನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ವಿವರಗಳನ್ನು ಅನುಬಂಧ–I ಮತ್ತು II ರಲ್ಲಿ ನೀಡಲಾಗಿದೆ.

ಆ) ಕಳುಹಿಸಿದ ದಿನಾಂಕಗಳನ್ನು ಅನುಬಂಧ–I ಮತ್ತು II ರಲ್ಲಿ ನೀಡಲಾಗಿದೆ.

ಇ) ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುವ ಸಂಸತ್ ಸದಸ್ಯರ ಸಭೆಗೆ ಮಾಹಿತಿಗಳನ್ನು ಆಗಿಂದ್ದಾಗೆ ನೀಡಲಾಗುತ್ತಿದೆ. ಹಾಗೂ ಇಲಾಖಾ ಅಧಿಕಾರಿಗಳು ದೆಹಲಿಗೆ ಕಾರ್ಯನಿಮಿತ್ತ ಹೋಗುವಾಗ ಮತ್ತು ದೂರವಾಣಿ ಮುಖಾಂತರ ಆಗಾಗ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಅನುಬಂಧ–I

(ಅರಣ್ಯ ಇಲಾಖೆಯ ಪ್ರಸ್ತಾವನೆಗಳು)

SL. No.	Details of proposal for Protected Area	Date on Which proposal (AFO) SER to GOL
1	2	3
I	**Development of Wildlife Sancturaies & National Park**	
1.	Adhichunchanagiri	05-05-2006
2.	Anshi	07-04-2006
3.	Arabithittu	05-05-2006
4.	Attiveri	05-05-2006
5.	BNP	05-05-2006
6.	Brahamagiri	05-05-2006
7.	BRT	08-05-2006

8.	Cauvery	05-05-2006
9.	Dandali	07-04-2006
10.	Daroli	05-05-2006
11.	Ghataprabha	05-05-2006
12.	Gudavi	05-05-2006
13.	Kudremukh	05-05-2006
14.	Melukote	05-05-2006
15.	Mookambike	05-05-2006
16.	Nagu	05-05-2006
17.	Pushpagiri	05-05-2006
18.	Ranebennur (Including GIB Project)	05-05-2006
19.	Ranganthittu	05-05-2006
20.	Sharavathi	05-05-2006
21.	Shettihalli	05-05-2006
22.	Someshwara	05-05-2006
23.	Talacauvery	05-05-2006
	Total	
II	**Project Tiger**	
a.	Bandipur	05-05-2006
b.	Nagamole	05-05-2006
c.	Bhadra	05-05-2006
d.	Project Tiger Estimation	
	Total	
III	**Project Elephant**	15-05-2006
	Total	
IV	**Nilgiri Biosphere Reserve**	
a.	Balance amount of 2004-05	
b.	Fresh release of 2005-06	
	Total	

V	**Wet land conservation and** Management Programme	
1.	Shimoga Wildlife division	Submitted to IGF, NAEB, New Delhi vide letter dt: 02.06.2006/
VII	**Proposal under Forest Conservation Act 1980**	70 proposals for diversion of Forest land have been submit ted for clearance under F.c. Act-1980 from 2004 to 2007.

ಅನುಬಂಧ–II

(ಪರಿಸರ ಇಲಾಖೆಯ ಪ್ರಸ್ತಾವನೆಗಳು)

ಕ್ರ.ಸಂ.	ಪ್ರಸ್ತಾವನೆಗಳ ವಿವರ	ಸಲ್ಲಿಸಿದ ದಿನಾಂಕ
I	ರಾಷ್ಟ್ರೀಯ ನದಿ ಸಂರಕ್ಷಣೆ ಯೋಜನೆಯಡಿಯಲ್ಲಿ ಬಾಕಿ ಇರುವ ಪ್ರಕರಣಗಳು:–	
	(1) ಗೋಕಾಕ್	
	(2) ಬೈಲಹೊಂಗಲ	
	(3) ಶಹಬಾದ್	18.07.2001
	(4) ಹೊಸಪೇಟೆ	05.11.2002
	(5) ಗಂಗಾವತಿ	03.05.2005
	(6) ಕನಕಪುರ	
	(7) ಯಾದಗಿರಿ	
	(8) ದಾಂಡೇಲಿ	
	(9) ಸಿರಗುಪ್ಪ	
	(10) ಬಾಗಲಕೋಟೆ	
	(11) ಮಡಿಕೇರಿ	
	(12) ಸೌದತ್ತಿ	10.03.2006
II	ರಾಷ್ಟ್ರೀಯ ಕೆರೆ ಸಂರಕ್ಷಣೆ ಯೋಜನೆಯಡಿಯಲ್ಲಿ ಬಾಕಿ ಇರುವ ಪ್ರಕರಣಗಳು:–	
	(1) ಬೆಳ್ಳಕ್ಕಿ ಕೆರೆ, ಶಿವಮೊಗ್ಗ	04.12.2003
	(2) ಮುಚಖಂಡಿ ಕೆರೆ, ಬಾಗಲಕೋಟೆ	26.04.2006
	(3) ತ್ರಿಪುರಾಂತಕೇಶ್ವರ ಕೆರೆ, ಬಸವಕಲ್ಯಾಣ	27.09.2004
	(4) ಮೊಗೆಕೆರೆ, ಉತ್ತರಹಳ್ಳಿ, ಬೆಂಗಳೂರು	08.04.2003
	(5) ಅಮಾನಿಕೆರೆ, ತುಮಕೂರು	29.03.2006

	(6) ಬೇಗಂ ತಲಾಬ್, ವಿಜಾಪುರ	09.01.2006
	(7) ದೊಡ್ಡ ಕೆರೆ, ಸಕಲೇಶಪುರ	07.03.2006
	(8) ಉಣಕಲ್ ಕೆರೆ, ಹುಬ್ಬಳ್ಳಿ	04.04.2006
III	ತಾತಗುಣಿ ಎಸ್ಟೇಟ್‌ನಲ್ಲಿ ಬರಸೆರ ಸಸ್ಯಗಳನ್ನು ಬೆಳೆಸುವುದು	21.01.2004
IV	ಕೊಡಗು ಜಿಲ್ಲೆ (ದೇವರ ಕಾಡು) ಪವಿತ್ರವನ ಸಂರಕ್ಷಣೆ	07.11.2003
V	ಕರಾವಳಿ ಜಿಲ್ಲೆಗಳಲ್ಲಿ ಜೀವ ವೈವಿಧ್ಯ ನಿರ್ವಹಣೆಯ ಸಂರಕ್ಷಣೆ	12.09.2003
VI	ಕುಂದಾಪುರ ಉಪ ಅರಣ್ಯ ವಿಭಾಗ, ಮಂಗಳೂರು ಅರಣ್ಯ ವಿಭಾಗದಲ್ಲಿ ಕಾಂಡ್ಲವನ ಅಭಿವೃದ್ಧಿ ಮತ್ತು ಸಂರಕ್ಷಣೆ	29.06.2004
VII	ಬೆಳಗಾವಿ ಅರಣ್ಯ ವಿಭಾಗದ ಹಿಡಕಲ್ ಹಿನ್ನೀರು ಯೋಜನೆ, ರಾಣೆಬೆನ್ನೂರು ವನ್ಯಜೀವಿ ವಿಭಾಗದ ಘಟಪ್ರಭ ಪಕ್ಷಿಧಾಮ ಮತ್ತು ಗದಗ್ ಅರಣ್ಯ ವಿಭಾಗದ ಮಾಗಡಿ ತರಿಭೂಮಿ ಸಂರಕ್ಷಣೆ ಮತ್ತು ಅಭಿವೃದ್ಧಿ.	17.09.2003

1074 (1600) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವ ಯಾವ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ (ಬಾಕಿ ಇರುವ ಅನುಮೋದನೆಗೆ ಕಾದಿರುವ ಪ್ರಸ್ತಾವನೆಗಳು)

ಆ) ಸದರಿ ಬಾಕಿ ಇರುವ ಪ್ರಸ್ತಾವನೆಗಳನ್ನು ಕಳುಹಿಸಿದ್ದು ಯಾವಾಗ;

ಇ) ಈ ಪ್ರಸ್ತಾವನೆಗಳ ಅನುಮೋದನೆಗಾಗಿ ರಾಜ್ಯ ಸರ್ಕಾರ ಮಾಡಿದ ಪ್ರಯತ್ನಗಳೇನು;

ಈ) ಈ ಪ್ರಸ್ತಾವನೆಗಳು ಹಾಲಿ ಯಾವ ಹಂತದಲ್ಲಿದೆ?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿರುವ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿರುತ್ತವೆ:

1. ಹಾಸನದಲ್ಲಿ ಜವಳಿ ನಿರ್ದಿಷ್ಟ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ ಸ್ಥಾಪಿಸುವುದು.